# ಡಿಸೆಂಬರ್, 2016 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು

- ಮೂರನೇ ವರ್ಷದ ತಾಳೆ ತೋಟಕ್ಕೆ ರಸಗೊಬ್ಬರವನ್ನು ಪ್ರತಿ ಎಕರೆಗೆ ೧೪೮ ಕೆ.ಜಿ ಯೂರಿಯಾ, ೨೧೩ ಕೆ ಜಿ ಸಿಂಗಲ್ ಸೂಪರ್ ಫಾಸ್ಫೇಟ್, ೧೧೪ ಕೆ.ಜಿ. ಮೂರೇಟ್ ಆಫ್ ಪೊಟಾಷ್ ಗಳನ್ನು ನಾಲ್ಕು ಕಂತಿನಲ್ಲಿ ಮತ್ತು ೨೮ ಕೆ.ಜಿ ಮೆಗ್ನೀ ಷಿಯಂ ಸಲ್ಫೇಟ್ ಗೊಬ್ಬರವನ್ನು ಎರಡು ಕಂತಿನಲ್ಲಿ ನೀಡುವುದು ಸೂಕ್ತ.

- ತಾಳೆ ಬೆಳೆ ತೋಟಗಳಲ್ಲಿ ಅಂತರ ಬೆಳೆಗಳನ್ನು ಬೆಳೆಯುವಾಗ ತಾಳೆ ಗಿಡಗಳ ಸಮೀಪದಲ್ಲಿ ಉಳಿಮೆ ಮಾಡಬಾರದು ಹಾಗೂ ಹಸಿರು ಗರಿಗಳನ್ನು ತೆಗೆದಲ್ಲಿ ಇಳುವರಿ ಕಡಿಮೆಯಾಗುವುದು.

- ಉತ್ಪತಿಯಾಗುವ ಹೂ ಗೊಂಕಾಲುಗಳನ್ನು ನಾಟಿ ಮಾಡಿದ ಮೊದಲ, ಎರಡು ಮತ್ತು ಮೂರನೇ ವರ್ಷಗಳಲ್ಲಿ ತೆಗೆಯಬೇಕು. ಈ ಕ್ರಿಯೆಯಿಂದ ಗಿಡದ ಕಾಂಡವು ಗಟ್ಟಿಯಾಗಿ ಬೆಲೆಯುವುದರೊಂದಿಗೆ ಬೇರುಗಳು ಬಲವಾಗಿ ಬೆಳೆಯುತ್ತವೆ.

- ಬೋರಾನ್ ಕೊರತೆ ಲಕ್ಷಣಗಳು ಮತ್ತು ನಿರ್ವಹಣೆ: ಲಕ್ಷಣಗಳು - ಬೋರಾನ್ ಕೊರತೆ ಉಂಟಾದಾಗ ತಾಳೆ ಗರಿಗಳ ತುದಿಯ ಕೊಕ್ಕಿಯಾಕಾರದಲ್ಲಿ ಬಾಗುತ್ತದೆ ಮತ್ತು ಮೀನಿನ ಅಸ್ತಿ ಪಂಜರದಂತೆ ಕಾಣುತ್ತದೆ. ಬೋರಾನ್ ಕೊರತೆಯನ್ನು ನಿವಾರಿಸಲು ಪ್ರತಿ ಗಿಡಕ್ಕೆ 100 ಗ್ರಾಂ ಬೋರಾಕ್ಸ್ ನ್ನು ಮಣ್ಣು ಮತ್ತು ಎಲೆಗಳ ಪರೀಕ್ಷೆಗಳನ್ನು ಆಧಾರಿಸಿ ನೀಡಬೇಕು.

- ಮರಗಳಲ್ಲಿ ಸಾರಜನಕ (N) ಮತ್ತು ಪೊಟಾಷ್ (K) ಪ್ರಮಾಣವು ಏರು ಪೇರುದಾಗ ತಾಳೆ ಗರಿಗಳಲ್ಲಿ ಬಿಳಿ ಪಟ್ಟಿಗಳು ಕಾಣಿಸುತ್ತದೆ. ಈ ತರಹದ ಚಿಹ್ನೆಗಳು ಎಲೆಯ ಗರಿಗಳಲ್ಲಿ ಕಾಣಿಸಿಕೊಂಡಾಗ ಪ್ರತಿ ಗಿಡಗಳಿಗೆ 4 ಕೆ.ಜಿ.ಗಳಷ್ಟು ಮ್ಯುರೇಟ್ ಆಪ್ ಪೊಟಾಷ್ (MOP) ಎಲೆ ಮತ್ತು ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ಹಾಕಿ ಮತ್ತು ತಾತ್ಕಾಲಿಕವಾಗಿ ಸಾರಜನಯುಕ್ತ ಗೊಬ್ಬರಗಳನ್ನು ನಿಲ್ಲಿಸುವುದು.